॥ ಶ್ರೀಪತಿರ್ಮಾನದೋ ನಃ ॥

ಶ್ರೀರಾಘವೇಂದ್ರಸ್ತವರತ್ನಮಾಲಾ

(ಶ್ರೀರಾಘವೇಂದ್ರಸ್ತವಾಷ್ಟಕಮ್)

(ಅಶ್ವಧಾಟೀವೃತ್ತಮ್)

ರಚನೆ:

ವೇ॥ ಕಲ್ಲಾಪುರ ಶ್ರೀಅಣ್ಣಯ್ಯಾಚಾರ್ಯರು

ಕರ್ಣಾಟಕಭಾಷಾನುವಾದಃ–

ವಿದ್ವಾನ್ ಜಿ. ವಿಜಯವಿಕ್ರಮದಾಸ್. ಎಂ.ಎ.

ವಿಜಯಮಂದಿರ, ಎಲಹಂಕ,

ಬೆಂಗಳೂರು-560064

ಪ್ರಕಾಶಕರು:

ಬಲರಾಮಾಚಾರ್ಯರು(ಹೊನ್ನಾಳಿ)

ಈಜುಕೊಳಬಡಾವಣೆ, ಬೆಂಗಳೂರು–560003

2003

|| ಶ್ರೀಪತಿರ್ಮಾನದೋ ನಃ ||

ಸತ್ಪಕ್ಷಪಾತಿನೋ ವಂದೇ ಶ್ರೀವಾಯುಮತದೀಕ್ಷಿತಾನ್ ।
ಗೋಪಾಲದಾಸವರ್ಯಾನ್ ತಾನ್ ಮಮ ವಿದ್ಯಾಸುಬೋಧಕಾನ್ ॥

ಎರಡುಮಾತು

ಈ ಸ್ತೋತ್ರವನ್ನು ವಿರಚಿಸಿದ **ಕಲ್ಲಾಪುರ ಶ್ರೀಅಣ್ಣಯ್ಯಾಚಾರ್ಯವರ್ಯ**ರು ಹೊನ್ನಾಳಿಕ್ಷೇತ್ರನಿವಾಸಿಗಳು. ಶ್ರೀರಾಯರ ಪರಮಭಕ್ತರು. ಅವರ ಸದ್ವಂಶಸಂಜಾತರಾದ ಶ್ರೀಬಲರಾಮಾಚಾರ್ಯರು ತಮ್ಮ ಎಪ್ಪತ್ತನೆಯ ವರ್ಷದ ಶಾಂತಿಮಹೋತ್ಸವದ ಶುಭಸಂದರ್ಭದಲ್ಲಿ ಈ ಕೃತಿಯನ್ನು ಪ್ರಕಾಶಪಡಿಸಿ ಅವರ ಹಿರಿಯರೆಲ್ಲರ ಅನುಗ್ರಹ ವಿಶೇಷಕ್ಕೆ ಪಾತ್ರರಾಗಿದ್ದಾರೆ.

ಶ್ರೀಬಲರಾಮಾಚಾರ್ಯರು ನಮ್ಮ ತೀರ್ಥರೂಪರಾದ ಪರಮಪೂಜ್ಯ **ಹರಿದಾಸರತ್ನಂ ಶ್ರೀಗೋಪಾಲದಾಸವರ್ಯ**ರಲ್ಲಿ ಭಕ್ತಿಮಾಡುತ್ತಾ ನಮ್ಮ 'ವಿಜಯಮಂದಿರ'ದ ಭಕ್ತರೆಲ್ಲರಿಗೂ ಸುಪರಿಚಿತರು. ಇವರು ಅಪರೋಕ್ಷೀಕೃತಶ್ರೀಶರಾದ ಹರಿದಾಸವರೇಣ್ಯರ ಕನ್ನಡಕೃತಿಗಳನ್ನು ತಮ್ಮ ಸುಕಂಠದಿಂದ ಹಾಡಿ ನಲಿಯುವ ಸುಕಂಠೀರವರು. ಶ್ರೀಯುತರು ಅವರ ಹಿರಿಯರಿಂದ ವಿರಚಿತವಾದ ಈ ಸ್ತೋತ್ರಕ್ಕೆ ಕನ್ನಡದಲ್ಲಿ ನನ್ನಿಂದ ಅನುವಾದವನ್ನು ಮಾಡಿಸಿ ನನ್ನನ್ನೂ ಈ ಸುಸಮಯದಲ್ಲಿ ಜತೆಗೂಡಿಸಿಕೊಂಡು ತಮ್ಮ ಅಭಿಮಾನವಿಶೇಷವನ್ನು ತೋರಿದ್ದಾರೆ.

ಈ ಸುಕೃತಿಗಳ ಕೃತಿಯನ್ನು ಓದಿ ಸುಜನರು ಆನಂದಪಟ್ಟರೆ ಶ್ರೀಬಲರಾಮಾಚಾರ್ಯರು ಕೃತಕೃತ್ಯರೇ ಸರಿ.

ವಿಜಯಮಂದಿರ
ಎಲಹಂಕ,
ಬೆಂಗಳೂರು–560064

ಇತಿ
ಸುಜನವಿಧೇಯ
ಜಿ. ವಿಜಯವಿಕ್ರಮದಾಸ

॥ ಶ್ರೀಪತಿರ್ಮಾನದೋ ನಃ ॥

ಶ್ರೀರಾಘವೇಂದ್ರಸ್ತವರತ್ನಮಾಲಾ

ಕರ್ಣಾಟಕಭಾಷಾನುವಾದಸಹಿತಾ

ಪ್ರಾರಭ್ಯತೇ

ಶ್ರೀರಾಘವೇಂದ್ರಮುನಿವಾರೇಂದ್ರಸಂವಿನುತಮಾರಾರಿಮಸ್ತಕನದೀ-
ಪೂರಾಮಲೋತ್ತಮಸುಗೀರಾಶಿವಾದಿಮದವಾರಾಪಹಾರಕಗುರೋ ।
ಘೋರಾಭಿಧಾಮಗಮನಿವಾರೈಕದೀಕ್ಷಪರಮಾರಾಧಿತಾಂಘ್ರಿಯುಗಲಂ
ಶ್ರೀರಾಮಚಂದ್ರಮಲಮಾರಾಧಯನ್ ವ್ರತಿವರಾರಾಧ್ಯ
ಮಾಮವ ಸದಾ ॥ ೧ ॥

ಅನ್ವಯ:– ಮುನಿವಾರೇಂದ್ರಸಂವಿನುತ, ಮಾರಾರಿಮಸ್ತಕನದೀ-ಪೂರಾಮಲೋತ್ತಮಸುಗೀರಾಶಿವಾದಿಮದವಾರಾಪಹಾರಕಗುರೋ, ಘೋರಾಭಿಧಾಮಗಮನಿವಾರೈಕದೀಕ್ಷ, ಪರಮಾರಾಧಿತಾಂಘ್ರಿಯುಗಲಂ, ಶ್ರೀರಾಮಚಂದ್ರಂ, ಅಲಂ, ಆರಾಧಯನ್, ವ್ರತಿವರಾರಾಧ್ಯ ಶ್ರೀರಾಘ-ವೇಂದ್ರ, ಮಾಂ, ಸದಾ, ಅವ, ॥

ಅರ್ಥ:- ಶಾಸ್ತ್ರಾರ್ಥಮನನಶೀಲರಾದ ಜ್ಞಾನಿಸಮೂಹದಿಂದ ಸಂಸ್ತುತರಾದ, ಮನ್ಮಥನ ಶತ್ರುವಾದ ಶ್ರೀಮಹಾರುದ್ರದೇವರ ಶಿರಸ್ಸಿನಲ್ಲಿರುವ ಗಂಗಾನದಿಯ ಪ್ರವಾಹದಂತೆ ನಿರ್ಮಲವಾದ ಮತ್ತು ಉತ್ತಮವಾದ ಸಮೀಚೀನವಾದ (ಶಾಸ್ತ್ರೀಯವಾದ) ವಾಕ್ಸಮೂಹದಿಂದ ದುರ್ವಾದಿಗಳ ಗರ್ವಸಮೂಹವನ್ನು

ನಿರಾಸಗೊಳಿಸುವ ಗುರುವರ್ಯರಾದ, ಭಯಂಕರವಾದ ನಾಮವುಳ್ಳ (ನರಕಾದ್ಯನರ್ಥಸಾಧಕತ್ವೇನ ಶ್ರವಣಮಾತ್ರದಿಂದಲೇ ಸಜ್ಜನರಿಗೆ ಭಯ ಪ್ರದವಾದ ಮಾಯಾವಾದಿಮತಗಳು ಇಲ್ಲಿ ವಿವಕ್ಷಿತ) ದುಷ್ಟಗಳಾದ ಶಾಸ್ತ್ರಗಳ ನಿರಾಕರಣೆಯೇ ಮುಖ್ಯದೀಕ್ಷೆಯಾಗಿವುಳ್ಳ, ಉತ್ತಮರಾದ ರಮಾಬ್ರಹ್ಮಾದಿ ದೇವತೆಗಳಿಂದ ಆರಾಧಿಸಲ್ಪಟ್ಟ ಪಾದದ್ವಂದ್ವವುಳ್ಳ, ಸೀತಾಸಹಿತ ರಾಮಚಂದ್ರದೇವರನ್ನು ಚನ್ನಾಗಿ ಸೇವಿಸುತ್ತಿರುವ, ಯತಿಶ್ರೇಷ್ಠರಿಂದಲೂ ಸಂಸೇವ್ಯರಾದ, ಜ್ಞಾನಾದಿಸಂಪದ್ಯುಕ್ತರಾದ ಶ್ರೀರಾಘವೇಂದ್ರಶ್ರೀಮಚ್ಚರಣರೇ ನನ್ನನ್ನು ಯಾವಾಗಲೂ ರಕ್ಷಿಸಿರಿ.

ಮಂತ್ರಾಲಯೋಲ್ಲಸಿತ ತಂತ್ರಾಳಿದೀಪಕರ ಮಾಂ ತ್ರಾಹಿ ಸರ್ವಸುಗುರೋ
ಸಂತ್ರಾತಸನ್ನಿಕರ ಮಾಂ ತ್ರಾತುಮತ್ರ ಕಿಮು ಮಂತ್ರಾಂಬುಧೇ
ನ ಹಿ ಬಲಮ್ ।
ತಂತ್ರಂ ಹರೇರ್ಜಗದತಂತ್ರೋऽಸ್ಯ ಸೋऽಯಮಿತಿ
ತಂತ್ರೋಕ್ತಿಭಿಃ ಕುಮತಿನಃ
ಸಂತ್ರಾಸಯನ್ನಿಖಿಲಯಂತ್ರಾಸುನೇರಿತಸುತಂತ್ರಾದಿಭಾವವಿದಲ ॥ ೨ ॥

ಅನ್ವಯ:– ಮಂತ್ರಾಲಯೋಲ್ಲಸಿತ, ತಂತ್ರಾಳಿದೀಪಕರ, ಸಂತ್ರಾತಸನ್ನಿಕರ, ಮಂತ್ರಾಂಬುಧೇ, ಅತ್ರ, ಮಾಂ , ತ್ರಾತುಂ, ಬಲಂ, ನ ಹಿ ಕಿಮು, ಹರೇಃ ಜಗತ್, ತಂತ್ರಂ, ಅಸ್ಯ ಸಃ ಅಯಂ, ಅತಂತ್ರಃ, ಇತಿ ತಂತ್ರೋಕ್ತಿಭಿಃ , ಕುಮತಿನಃ, ಸಂತ್ರಾಸಯನ್, ನಿಖಿಲಯಂತ್ರಾಸುನೇರಿತಸುತಂತ್ರಾದಿ-ಭಾವವಿದಲ, ಸರ್ವಸುಗುರೋ, ಮಾಂ ತ್ರಾಹಿ ॥

ಅರ್ಥ:– ಮಂತ್ರಾಲಯಕ್ಷೇತ್ರದಲ್ಲಿ ಕುಂದದೆ ವಿರಾಜಿಸುವ, ಶಾಸ್ತ್ರಸಮೂಹವನ್ನು ಬೆಳಗಿಸುವ (ತಮ್ಮ ಉತ್ತಮವ್ಯಾಖ್ಯಾನಗಳಿಂದ ಶಾಸ್ತ್ರಗ್ರಂಥಗಳ ತಾತ್ಪರ್ಯವನ್ನು ಪ್ರಕಾಶಗೊಳಿಸುವ), ಚನ್ನಾಗಿ ರಕ್ಷಿಸಲ್ಪಟ್ಟ ಸಜ್ಜನರಸಮೂಹವುಳ್ಳ, (ಸದ್ವೈಷ್ಣವ)ಮಂತ್ರಗಳಿಗೆ ಸಮುದ್ರದಂತಿರುವ,

(ಗುರುವರ್ಯರೇ), ಈ ಸಂಸಾರಸಮುದ್ರದಲ್ಲಿ ಮುಳುಗಿದ ನನ್ನನ್ನು, ರಕ್ಷಿಸಲು(ಉದ್ಧರಿಸಲು), ಸಾಮರ್ಥ್ಯವು ಇಲ್ಲವೇನು? (ಸಕಲಸಜ್ಜನರನ್ನು ರಕ್ಷಿಸಲು ಸಮರ್ಥರಾದ ತಾವು ತಮ್ಮನ್ನೇ ನಂಬಿರುವ ನನ್ನನ್ನು ರಕ್ಷಿಸಲು ಅಸಮರ್ಥರಾದಿರಾ? ಸರ್ವಥಾ ಇಲ್ಲ ಎಂದು ಭಾವ), ಶ್ರೀಹರಿಗೆ ಈ ಪ್ರಪಂಚವು ಅಧೀನವು, ಈ ಜಗತ್ತಿಗೆ ಶಾಸ್ತ್ರಪ್ರಸಿದ್ಧನಾದ ಶ್ರೀಹರಿಯು ಸರ್ವಥಾ ಅಧೀನನಲ್ಲ. ಈ ರೀತಿಯ ಶಾಸ್ತ್ರದ ಮಾತುಗಳಿಂದ ದುರ್ಮತಾವಲಂಬಿಗಳನ್ನು, ತತ್ತರಿಸುವಂತೆ ಮಾಡುವ, ಸರ್ವಜೀವ ನಿಯಾಮಕರಾದ ವಾಯುದೇವರಿಂದ(ವಾಯುದೇವರ ಅವತಾರಿಗಳಾದ ಶ್ರೀಮದಾನಂದ ತೀರ್ಥರಿಂದ) ಪ್ರವರ್ತಿತವಾದ ಸಮೀಚೀನವಾದ ಸಿದ್ಧಾಂತಗ್ರಂಥಗಳ ಹಾಗೂ ಅವುಗಳ ಟೀಕಾಗ್ರಂಥಗಳ ತಾತ್ಪರ್ಯವನ್ನು ಭೇದಿಸುವವರಾದ(ತಿಳಿದವರಾದ), ಎಲ್ಲ ಸುಜೀವಿಗಳಿಗೂ ಉತ್ತಮ ಗುರುಗಳಾದ (ಶ್ರೀರಾಘವೇಂದ್ರಪ್ರಭುಗಳೇ) ನನ್ನನ್ನು ರಕ್ಷಿಸಿರಿ.

ಶ್ಯಾಮಾವದಾತಶುಭರಾಮಾಂಘ್ರಿಸಾರಸಸುಧಾಮಾಯಮಾನಹೃದಯಂ
ಕೋ ಮಾನವೋ ಭಜತಿ ನಾಮಾನಪಾಪಹರನಾಮಾನಮೇನಮನಘಮ್ ।
ಶ್ರೀಮಾನಯಂ ದಿಶತು ಸೋಮಾನನಃ ಸುಖಮಮಾನಂ ಸದಾ ಯತಿಪತಿಃ
ಪ್ರೇಮಾತಿಭಾರಧರಭೂಮಾನವದ್ಯಮತಿಧಾಮಾದಿಸದ್ಗುಣಗಣಃ ॥ ೩ ॥

ಅನ್ವಯ:– ಶ್ಯಾಮಾವದಾತಶುಭರಾಮಾಂಘ್ರಿಸಾರಸಸುಧಾಮಾಯಮಾನ-ಹೃದಯಂ, ಅಮಾನಪಾಪಹರನಾಮಾನಂ, ಅನಘಂ, ಏನಂ, ಕೋ ಮಾನವಃ, ನ ಭಜತಿ, ಸೋಮಾನನಃ, ಪ್ರೇಮಾತಿಭಾರಧರಭೂಮಾ, ಅನವದ್ಯಮತಿಧಾಮಾದಿಸದ್ಗುಣಗಣಃ, ಶ್ರೀಮಾನ್, ಅಯಂ, ಯತಿಪತಿಃ, ಅಮಾನಂ, ಸುಖಂ, ಸದಾ, ದಿಶತು

ಅರ್ಥ:– ತಿಳಿನೀಲಿನಮೈಬಣ್ಣದ ಮಂಗಳಸ್ವರೂಪಿಯಾದ ಶ್ರೀರಾಮಚಂದ್ರದೇವರ ಪಾದಕಮಲಗಳನ್ನೇ ಉತ್ತಮವಾದ ಮಂದಿರವೆಂಬಂತೆ ತಿಳಿಯುವ

ಮನಸ್ಸುಳ್ಳ, (ಶ್ರೀರಾಮದೇವರ ಪಾದವೇ ಗತಿ ಎಂದು ಚಿಂತಿಸುವ), ಅಮಿತವಾದ ಪಾಪರಾಶಿಯನ್ನು ಪರಿಹರಿಸುವರೆಂಬ ಅರ್ಥವುಳ್ಳ ನಾಮವನ್ನು ಹೊಂದಿದ, (ಅಘಂ ದ್ರಾವಯತೇ ಯಸ್ಮಾತ್ ವೇಂಕಾರೋ ವಾಂಛಿತ-ಪ್ರದಃ । ರಾಘವೇಂದ್ರಯತಿಸ್ತಸ್ಮಾತ್ ಲೋಕೇ ಖ್ಯಾತೋ ಭವಿಷ್ಯತಿ ॥ ಎಂಬ ನರಸಿಂಹಪುರಾಣದ ವಚನವನ್ನು ಇಲ್ಲಿ ಸ್ಮರಿಸಬಹುದು.) ಸ್ವಯಂ ಪಾಪರಹಿತರಾದ, ಪ್ರಸಿದ್ಧರಾದ, ಶ್ರೀರಾಘವೇಂದ್ರಪ್ರಭುಗಳನ್ನು ಯಾವ ಮನುಜನು ತಾನೆ ಸೇವಿಸುವುದಿಲ್ಲ?, ಜ್ಞಾನಾದಿಸಂಪನ್ನರಾದ, ಚಂದ್ರನಂತೆ ಮುಖವುಳ್ಳ, (ಸಜ್ಜನರಲ್ಲಿ) ಅತಿಶಯವಾದ ಪ್ರೇಮದಿಂದ ಪೂರ್ಣರಾದ, ನಿರ್ದೋಷವಾದ ಬುದ್ಧಿಗೆ ಆಶ್ರಯವಾಗೋಣವೇ ಮೊದಲಾದ ಉತ್ತಮವಾದ ಗುಣಸಮೂಹವುಳ್ಳ, ಯತಿವರ್ಯರಾದ ಈ ಶ್ರೀಮನ್ಮಂತ್ರಾ-ಲಯಪ್ರಭುಗಳು ಅಮಿತವಾದ ಸುಖವನ್ನು ಯಾವಾಗಲೂ ನೀಡಲಿ.

ಕಾಮಾರಿವನ್ನಿಹತಕಾಮಂ ಸದಾ ಸುಜನಕಾಮಪ್ರದಾನನಿಪುಣಂ
ಹೇ ಮಾನವಾ ಭಜತ ಸಾಮಾದಿವೇದನುತಭೂಮಾಧವಂ ಗುರುವರಮ್ ।
ಸೀಮಾತಿರೇಕಿಮತಧೀಮಾಯಿದರ್ಪತೃಣಧೂಮಾಗ್ನಿಕಲ್ಪಸುಗಿರಂ
ಹೇಮೋದರಪ್ರತಿಮಧಾಮಾನಮಾಶು ಮಮ ಮೇ
ಮಾನಸಾಮಲತಮಮ್ ॥ ೪ ॥

ಅನ್ವಯಃ– ಹೇ ಮಾನವಾಃ,(ಯೂಯಂ), ಕಾಮಾರಿವತ್ ನಿಹತಕಾಮಂ, ಸದಾ, ಸುಜನಕಾಮಪ್ರದಾನನಿಪುಣಂ, ಸೀಮಾತಿರೇಕಿಮತಧೀಮಾಯಿ-ದರ್ಪತೃಣಧೂಮಾಗ್ನಿಕಲ್ಪಸುಗಿರಂ, ಹೇಮೋದರಪ್ರತಿಮಧಾಮಾನಂ, ಸಾಮಾದಿವೇದನುತಭೂಮಾಧವಂ, ಮೇ, ಮಾನಸಾಮಲತಮಂ, ಮಮ, ಗುರುವರಂ, ಭಜತ ॥

ಅರ್ಥ:–ಎಲೈ, ಮಾನವರೇ (ನೀವು), ಮನ್ಮಥಶತ್ರುವಾದ ಮಹಾ-ರುದ್ರದೇವರಂತೆ, ಹೇಯವಾದ ಕಾಮವನ್ನು ನಿಗ್ರಹಿಸಿದ, ಯಾವಾಗಲೂ

ಸುಜನರ ಸದಿಚ್ಛೆಗಳನ್ನು ಪೂರೈಸುವ ವಿಷಯದಲ್ಲಿ ಸಮರ್ಥರಾದ, ಶಾಸ್ತ್ರದ ಮರ್ಯಾದೆಯ (ಎಲ್ಲೆಯನ್ನು) ಅತಿಕ್ರಮಣವುಳ್ಳ ಮತದಲ್ಲಿ (ಆಗ್ರಹ ರೂಪ) ಬುದ್ಧಿಯುಳ್ಳ ಮಾಯಾವಾದಿಗಳ ದರ್ಪವೆಂಬ ಹುಲ್ಲಿಗೆ ಬೆಂಕಿಯಂತಿರುವ ಸಮೀಚೀನವಾದ ಮಾತುಳ್ಳ, ಹಿರಣ್ಯಗರ್ಭನಾದ ಚತುರ್ಮುಖ ಬ್ರಹ್ಮದೇವರಂತೆ ಕಾಂತಿಸಂಪನ್ನರಾದ, ಸಾಮವೇದವೇ ಮೊದಲಾದ ವೇದಗಳಿಂದ ಸಂಸ್ತುತನಾದ, ಭೂಮಿಯಲ್ಲಿ ಅವತರಿಸಿದ (ಜನಕರಾಜನಿಗೆ ಯಜ್ಞಭೂಮಿಯಲ್ಲಿ ದೊರಕಿದ) ಲಕ್ಷ್ಮೀಸ್ವರೂಪಳಾದ ಸೀತಾದೇವಿಗೆ ಪತಿಯಾದ ಶ್ರೀರಾಮಚಂದ್ರದೇವರನ್ನೇ ಸ್ವಾಮಿಯಾಗಿವುಳ್ಳ, (ಶ್ರೀರಾಮ ದೇವರ ಆರಾಧಕರಾದ), ನನ್ನ ಮನಸ್ಸನ್ನು ಪರಿಶುದ್ಧಗೊಳಿಸುವ, ನನ್ನ ಗುರು ವರ್ಯರಾದ (ಶ್ರೀಮನ್ಮಂತ್ರಾಲಯಪ್ರಭುಗಳನ್ನು) ಭಜಿಸಿರಿ.

ಮನ್ಯಾಮಹೇ ಸುಮತಿಧನ್ಯಾನ್ಯದೀಯಬುಧಮಾನ್ಯಾಂಘ್ರಿಪೂಜನರತಾ-
ನನ್ಯಾನಮಾನ್ಯಜಡವನ್ಯಾವನೀಜಪಶುಜನ್ಯಾ ಸಮಾನಕುಜನೀನ್ ।
ದುರ್ನ್ಯಾಯವಾದಿಕುಲಜನ್ಯೇ ಗಿರಾಮಿಹ ಸುಜನ್ಯೇ ರತಾನ್ ಗುರುವರಾನ್
ಸನ್ನ್ಯಾಯಸಂವಿಜಿತದುರ್ಮಾಯಿಯೋಧವರಮಾನ್ಯಾನ್ನಮೋ
ಯತಿವರಾನ್ ॥ ೫ ॥

ಅನ್ವಯ:– ಯದೀಯಬುಧಮಾನ್ಯಾಂಘ್ರಿಪೂಜನರತಾನ್, ಸುಮತಿಧನ್ಯಾನ್, ಅನ್ಯಾನ್, ಅಮಾನ್ಯಜಡವನ್ಯಾವನೀಜಪಶುಜನ್ಯಾ ಸಮಾನಕುಜನೀನ್, ಮನ್ಯಾಮಹೇ, ಇಹ, ದುರ್ನ್ಯಾಯವಾದಿಕುಲಜನ್ಯೇ, ಗಿರಾಂ, ಸುಜನ್ಯೇ, ರತಾನ್, ಸನ್ನ್ಯಾಯಸಂವಿಜಿತದುರ್ಮಾಯಿಯೋಧವರಮಾನ್ಯಾನ್, ಯತಿವರಾನ್, ನುಮಃ, ॥

ಅರ್ಥ:– ಯಾವ ಗುರುವರ್ಯರ, ಜ್ಞಾನಿಗಳಿಂದ ಮಾನ್ಯವಾದ ಪಾದಾರಾಧನೆಯಲ್ಲಿ ಆಸಕ್ತರಾದ ಸುಮತಿಗಳಾದ ಸುಜನರನ್ನು

ಧನ್ಯರನ್ನಾಗಿಯೂ, ತದಿತರರನ್ನು, ಅಯೋಗ್ಯರಾದ,' ಮೂರ್ಖರಾದ ಅರಣ್ಯಪ್ರದೇಶಗಳಲ್ಲಿ ಜನಿಸಿದ, ಪಶುಗಳಂತೆ ಹೀನಯೋನಿಗಳಲ್ಲಿ ಹುಟ್ಟಿದವರಂತೆಯೂ ತಿಳಿಯುತ್ತೇವೆ. (ಜ್ಞಾನಿಸಂಸೇವ್ಯರಾದ, ಗುರುವರ್ಯರಾದ ಶ್ರೀಮನ್ಮಂತ್ರಾಲಯಪ್ರಭುಗಳ ಪಾದಾರಾಧನೆಯಲ್ಲಿ ತೊಡಗಿದ ಸುಜನರೇ ಧನ್ಯರು, ಇತರರು ಪಶುಗಳಂತೆ ನಿಂದ್ಯರು ಅರ್ಥಾತ್ ಜನ್ಮಸಾರ್ಥಕತೆಯನ್ನು ಹೊಂದದವರು ಎಂದು ಭಾವ.) ಈ ಲೋಕದಲ್ಲಿ ದುಸ್ತರ್ಕಗಳಿಂದ ವಾದಿಸುವ ಜನರ (ದುರ್ವಾದಿಗಳ) ಸಮೂಹನಿಮಿತ್ತದಿಂದ ಉಂಟಾದ (ದುರ್ವಾದಿಗಳ ನಿರಾಸಕ್ಕಾಗಿ ಪ್ರಯೋಗಿಸುವ), ಸತ್ತರ್ಕರೂಪವಾದ ಮಾತುಗಳ ಪ್ರಯೋಗದಲ್ಲಿ ಆಸಕ್ತರಾದ, ಉತ್ತಮವಾದ ಯುಕ್ತಿಗಳಿಂದ ಜಯಿಸಿದ ದುಷ್ಟರಾದ ಮಾಯಾವಾದಿಗಳೆಂಬ ಶ್ರೇಷ್ಠಯೋಧರುಗಳಿಂದಲೂ ಮಾನ್ಯರಾದ, ಯತಿಶ್ರೇಷ್ಠರಾದ ಗುರುವರ್ಯರನ್ನು ನಮಿಸುತ್ತೇವೆ.

ವಂದಾರುಭಕ್ತಜನವೃಂದಾರಕೇಂದ್ರವನಮಂದಾರಕಲ್ಪಲತಿಕಾ-
ವೃಂದಾಯಮಾನಮರವಿಂದಾಯತಾಕ್ಷಮುರುವಿಂದೂರಸಾಲಿವಿನುತಮ್ ।
ಬಂದೀಕೃತಕ್ಷಿತಿಪವೃಂದಂ ಮರಂದಮಧುಮಂದೀಕೃತೋಪಮಗಿರಂ
ವಂದೇ ಗುರುಂ ಕುಮತಿಮಂದಾಕ್ಷಕಾರಿಧಿಯಮಿಂದುಂ ತ್ರಿತಾಪಹರಣೇ ॥
॥ ೬ ॥

ಅನ್ವಯ:– ವಂದಾರುಭಕ್ತಜನವೃಂದಾರಕೇಂದ್ರವನಮಂದಾರಕಲ್ಪಲತಿಕಾ-ವೃಂದಾಯಮಾನಂ, ಅರವಿಂದಾಯತಾಕ್ಷಂ, ಉರುವಿಂದೂರಸಾಲಿವಿನುತಂ, ಬಂದೀಕೃತಕ್ಷಿತಿಪವೃಂದಂ, ಮರಂದಮಧುಮಂದೀಕೃತೋಪಮಗಿರಂ, ಕುಮತಿಮಂದಾಕ್ಷಕಾರಿಧಿಯಂ, ತ್ರಿತಾಪಹರಣೇ, ಇಂದುಂ, ಗುರುಂ, ವಂದೇ ॥

ಅರ್ಥ:– ನಮನಶೀಲರಾದ ಭಕ್ತಜನರಿಗೆ, ದೇವತೆಗಳಿಗೆ ಪ್ರಭುವಾದ ಇಂದ್ರದೇವರ ನಂದನವನದ ಮಂದಾರವೃಕ್ಷದ ಬಯಸಿದ ಅಭೀಷ್ಟಗಳನ್ನು ಪೂರ್ಣಮಾಡುವ ಕಲ್ಪಲತೆಗಳ ಸಮೂಹದಂತಿರುವ, ಕಮಲದಂತೆ ವಿಶಾಲನೇತ್ರರಾದ, ಅಸಂಖ್ಯಾಕವಾದ ಜ್ಞಾನಿಶ್ರೇಷ್ಠರ ಸಮೂಹದಿಂದ ಸಂಸ್ತುತರಾದ, ವಶವರ್ತಿಯಾದ ರಾಜರುಗಳ ಸಮೂಹವುಳ್ಳ, ಮಕರಂದದ ಸವಿಜೇನನ್ನೂ ಅಲ್ಲೀಕರಿಸುವ ಅಮೃತದಂತಹ ಮಾತುಳ್ಳ, ಕುಮತಿಗಳಿಗೆ ನಾಚಿಕೆಯನ್ನುಂಟುಮಾಡುವ ಬುದ್ಧಿಸಾಮರ್ಥ್ಯವುಳ್ಳ, ಮೂರುತಾಪಗಳನ್ನು ಅಪಹರಿಸುವುದರಲ್ಲಿ ಚಂದ್ರನಂತಿರುವ (ತಾಪತ್ರಯವನ್ನು ಪರಿಹರಿಸಿ ಚಂದ್ರನಂತೆ ಆಹ್ಲಾದಕರರಾದ), ಗುರುವರ್ಯರಾದ ಶ್ರೀಮನ್ಮಂತ್ರಾಲಯ ಪ್ರಭುಗಳನ್ನು ನಮಿಸುತ್ತೇನೆ ಹಾಗೂ ಸ್ತೋತ್ರಮಾಡುತ್ತೇನೆ.

ಪಾಯಾದಯಂ ಗುರುಪಾಯಾದನಾರತಮಮೇಯಾಮಲಾತ್ಮಮಹಿಮಾ
ಮಾಯಾತಮೋಹರಣಗೇಯಾರ್ಯಮಾ ಗುಣನಿಕಾಯ್ಯೋ
ಮಹಾಯತಿವರಃ ।
ದೇಯಾದಭೀಷ್ಟಮನಪಾಯಾಂ ರತಿಂ ಭವಭಯಾತತಾಪಹರಣೇ
ಧ್ಯೇಯೇ ನಿಜೇ ಪದಿ ಕುಜಾಯಾತ್ಮಜಾದಿಘನಹೇಯೇ
ನ ಯಾಪಯತು ಸಃ ॥ ೭ ॥

ಅನ್ವಯ:– ಅಮೇಯಾಮಲಾತ್ಮಮಹಿಮಾ, ಮಾಯಾತಮೋಹರಣ-ಗೇಯಾರ್ಯಮಾ, ಗುಣನಿಕಾಯ್ಯಃ, ಮಹಾಯತಿವರಃ, ಅಯಂ, ಗುರುಃ, ಅನಾರತಂ. ಅಪಾಯಾತ್, ಪಾಯಾತ್, ಭವಭಯಾತತಾಪಹರಣೇ, ಧ್ಯೇಯೇ, ನಿಜೇ, ಪದಿ, ಅನಪಾಯಾಂ , ರತಿಂ, ಅಭೀಷ್ಟಂ , ದೇಯಾತ್, ಕುಜಾಯಾತ್ಮಜಾದಿಘನಹೇಯೇ, ಸಃ, ನ, ಯಾಪಯತು ॥

ಅರ್ಥ:– ಸಂಪೂರ್ಣವಾಗಿ ತಿಳಿಯಲಾಗದ, ನಿರ್ದೋಷವಾದ ತಮ್ಮ ಮಹಿಮೆಯುಳ್ಳ, ಅಜ್ಞಾನವೆಂಬ ಕತ್ತಲೆಯನ್ನು ಪರಿಹರಿಸುವುದರಲ್ಲಿ ಸುತ್ತ್ಯನಾದ

ಸೂರ್ಯನಂತಿರುವ, ಸದ್ಗುಣಗಳ ರಾಶಿಗೆ ವಾಸಸ್ಥಾನರಾದ, ಯತಿಶ್ರೇಷ್ಠರಾದ, ಈ ಗುರುವರ್ಯರಾದ ಶ್ರೀಮನ್ಮಂತ್ರಾಲಯಪ್ರಭುಗಳು ಯಾವಾಗಲೂ ಆಪತ್ತುಗಳಿಂದ ರಕ್ಷಿಸಲಿ. ಸಂಸಾರದ ಭಯದಿಂದ ಉಂಟಾದ ತಾಪಗಳನ್ನು ಪರಿಹರಿಸುವ, ಧ್ಯಾನಿಸಲು ಯೋಗ್ಯವಾದ, ತಮ್ಮ ಪಾದಗಳಲ್ಲಿ ಶಾಶ್ವತವಾದ ಆಸಕ್ತಿಯನ್ನೂ, ಅಭೀಷ್ಟವನ್ನೂ ನೀಡಲಿ. ಅವಿಧೇಯರಾದ ಹೆಂಡತಿ,ಮಕ್ಕಳು ಮೊದಲಾದವರಿಂದ ಪೂರ್ಣವಾದ, ಹೇಯವಾದ ಸಂಸಾರದಲ್ಲಿ ಮತ್ತೆ ಮತ್ತೆ ಬೀಳದಂತೆ ಪ್ರಸಿದ್ಧರಾದ ಶ್ರೀಗುರುವರ್ಯರು ದೂರಮಾಡಲಿ.

ಪುಷ್ಟಿಂ ಕರೋತು ಮಮ ಕಷ್ಟಂ ಸುಪಿಷ್ಟಯತು ತುಷ್ಟಃ ಸ್ತವೇನ ಸತತಂ
ಪ್ರೇಷ್ಠಪ್ರದೋಽಸ್ತು ಪರಮೇಷ್ಠೀ ಗುರುರ್ಮಮ ವರಿಷ್ಠಃ ಸುತಾಪಸತತೇಃ ।
ದುಷ್ಟೋಗ್ರಮಾಯಿಮತಪಿಷ್ಟೀಕೃದಷ್ಟಗುಣಜುಷ್ಟಂ ವದಂತಮಪಿ ಯೋ
ಭ್ರಷ್ಟಂ ಸುಪಿಷ್ಟಯತಿ ತುಷ್ಟಂ ಗುಣೈರ್ಹರಿಮದುಷ್ಟಂ ಕುತಾರ್ಕಿಕಮಯಮ್ ॥ ೮ ॥

ಅನ್ವಯ:– ಯಃ, ದುಷ್ಟೋಗ್ರಮಾಯಿಮತಪಿಷ್ಟೀಕೃತ್, ಅದುಷ್ಟಂ, ಗುಣೈಃ, ತುಷ್ಟಂ, ಹರಿಂ, ಅಷ್ಟಗುಣಜುಷ್ಟಂ, ವದಂತಂ, ಭ್ರಷ್ಟಂ, ಕುತಾರ್ಕಿಕಮಯಂ, ಅಪಿ, ಸುಪಿಷ್ಟಯತಿ, (ಸಃ), ಸುತಾಪಸತತೇಃ, ವರಿಷ್ಠಃ, ಪರಮೇಷ್ಠೀ, ಗುರುಃ, ಮಮ, ಸ್ತವೇನ, ತುಷ್ಟಃ, ಅಸ್ತು, ಕಷ್ಟಂ, ಸುಪಿಷ್ಟಯತು, ಪುಷ್ಟಿಂ, ಕರೋತು, ಸತತಂ, ಮಮ, ಪ್ರೇಷ್ಠಪ್ರದಃ, ಅಸ್ತು ॥

ಅರ್ಥ:– ಯಾವ, ಅನಂತದೋಷದುಷ್ಟವಾದ, ಉಗ್ರಸ್ವರೂಪಿಗಳಾದ ಮಾಯಾವಾದಿಗಳ ಮತವನ್ನು ನಿರಾಸಗೊಳಿಸುವ, ನಿರ್ದೋಷನಾದ ಅನಂತಕಲ್ಯಾಣಗುಣಗಳಿಂದ ಪೂರ್ಣನಾದ ಶ್ರೀಹರಿಯನ್ನು ಎಂಟು ಗುಣಗಳನ್ನು ಮಾತ್ರ ಉಳ್ಳವನನ್ನಾಗಿ ಹೇಳುವ ಸಚ್ಛಾಸ್ತ್ರಜ್ಞಾನ ವಿಹೀನರಾದ

ದುಸ್ತರ್ಕಮಯವಾದ ತಾರ್ಕಿಕಮತವನ್ನು ಕೂಡ ನಿರಾಸಗೊಳಿಸುವ, (ಸಃ=ಅಂತಹ ಗುರುವರ್ಯರು), ಉತ್ತಮರಾದ ಯೋಗಿಗಳ ನಡುವೆ ಶ್ರೇಷ್ಠರಾದ , ಪರಮಪ್ರಿಯರಾದ, ಶ್ರೀಗುರು ವರ್ಯರು, ನನ್ನಸ್ತೋತ್ರದಿಂದ ಪ್ರೀತರಾಗಲಿ. ಕಷ್ಟಗಳನ್ನು ನಾಶಮಾಡಲಿ. ಸುಖಸಮೃದ್ಧಿಯನ್ನು ನೀಡಲಿ. ಯಾವಾಗಲೂ ನನಗೆ ಅತ್ಯಂತಪ್ರಿಯವಾದದ್ದನ್ನೇ ಕೊಡುವವರಾಗಲಿ.

ಅರ್ವಧಾಟೀಸುವೃತ್ತೇನ ಸರ್ವಪದ್ಯಾತ್ಮಕೈಸ್ತವೈಃ ।
ಕಲ್ಲಾಪುರಾಣ್ಣಯ್ಯಾಖ್ಯೇನ ರಚಿತೈಸ್ತುಷ್ಯತಾಂ ಗುರುಃ ॥ ೯ ॥

ಅನ್ವಯಃ– ಕಲ್ಲಾಪುರಾಣ್ಣಯ್ಯಾಖ್ಯೇನ, ಅರ್ವಧಾಟೀಸುವೃತ್ತೇನ, ರಚಿತೈಃ, ಸರ್ವಪದ್ಯಾತ್ಮಕೈ, ಸ್ತವೈಃ, ಗುರುಃ, ತುಷ್ಯತಾಮ್ ॥

ಅರ್ಥ:– ಕಲ್ಲಾಪುರದ ಅಣ್ಣಯ್ಯ ಎಂಬ ಹೆಸರನ್ನು ಹೊತ್ತವನಿಂದ, ಅಶ್ವಧಾಟೀ(ಮತ್ತೇಭವಿಕ್ರೀಡಿತ) ಎಂಬ ಉತ್ತಮವಾದ ಛಂದಸ್ಸಿನಿಂದ, ರಚಿತಗಳಾದ ಶ್ಲೋಕರೂಪಗಳಾದ ಸ್ತೋತ್ರಗಳಿಂದ ಗುರುವರ್ಯರು ಪ್ರೀತರಾಗಲಿ.

ಶ್ರೀರಾಘವೇಂದ್ರಸ್ತವರತ್ನಮಾಲಾ
ಕಂಠೇ ಜನೈಃ ಸದ್ಭಿರಿಯಂ ವಿಧಾರ್ಯತೇ ।
ಅವಾಪ್ಯತೇ ತೈಃ ಸುದೃಢಾ ಸದೇಷ್ಟಾ
ಸಂತಾನಸಂಪತ್ತಿರತ್ರ ಶೀಘ್ರಮ್ ॥ ೧೦ ॥

ಅನ್ವಯಃ– ಇಯಂ, ಶ್ರೀರಾಘವೇಂದ್ರಸ್ತವರತ್ನಮಾಲಾ, (ಯೈಃ) ಸದ್ಭಿಃ, ಜನೈಃ, ಕಂಠೇ, ವಿಧಾರ್ಯತೇ, ತೈಃ, ಇಷ್ಟಾ, ಸುದೃಢಾ, ಸಂತಾನಸಂಪತ್ತಿಃ, ಅತ್ರ, ಸದಾ, ಶೀಘ್ರಂ, ಅವಾಪ್ಯತೇ, ॥

ಅರ್ಥ:– ಈ ಜ್ಞಾನಾದಿಸಂಪದ್ಯುಕ್ತರಾದ ಶ್ರೀರಾಘವೇಂದ್ರಗುರುವರ್ಯರ

ಸ್ತೋತ್ರಗಳೆಂಬ ರತ್ನಗಳ ಮಾಲೆಯು ಯಾವ ಸಜ್ಜನರಿಂದ ತಮ್ಮ ಕಂಠದಲ್ಲಿ ಧರಿಸಲ್ಪಡುತ್ತದೆಯೋ ಅಂತಹ ಸಜ್ಜನರಿಂದ, ಪ್ರಿಯವಾದ, ದೀರ್ಘಕಾಲಿಕ ವಾದ ಸಂತಾನ-ಸಂಪತ್ತುಗಳ ಸಮೂಹವು ಇಹಲೋಕದಲ್ಲಿ ಯಾವಾಗಲೂ ಅತ್ಯಲ್ಪಕಾಲದಲ್ಲಿಯೇ ಹೊಂದಲ್ಪಡುತ್ತದೆ.

॥ ಶ್ರೀಮಧ್ವೇಶಾರ್ಪಣಮಸ್ತು ॥